# ಟಾಲ್‌ಸ್ಟಾಯ್‌ಗೆ ನಮಸ್ಕಾರ

ಸೆಪ್ಟೆಂಬರ್ 9ಕ್ಕೆ ಪ್ರಸಿದ್ಧ ಲೇಖಕ ಲಿಯೋ ಟಾಲ್‌ಸ್ಟಾಯ್ ಅವರ 190ನೇ ಜಯಂತಿ. ಟಾಲ್‌ಸ್ಟಾಯ್ ಸಾಹಿತ್ಯ ಲೋಕದ ದೈತ್ಯ ಪ್ರತಿಭೆಯಾಗಿದ್ದು ದಂತಕಥೆಯೆಂಬಂತೆ ಅವರ ಜೀವನವನ್ನು ನೋಡಲಾಗುತ್ತದೆ. ಲಿಯೋ ಎನ್ನುವ ಪದಕ್ಕೆ ಸಿಂಹ ಎಂಬ ಅರ್ಥವೂ ಇದೆ. ಜೀವನದುದ್ದಕ್ಕೂ ತಮಗೆ ಅನ್ನಿಸಿದ ಹಾಗೆ ಸ್ವಾತಂತ್ರ್ಯವಾಗಿ ಬದುಕಿದ, ಪ್ರೇಮ, ಕಾಮಗಳನ್ನು ಅನುಭವಿಸಿದ, ದಾಂಪತ್ಯದ ವಿವಿಧ ಮುಖಗಳನ್ನು ಕಂಡು ಚಿತ್ರಿಸಿದರು. ತಳಮಳ, ಆತ್ಮವಿಮರ್ಶೆಯೊಂದಿಗೆ ಬದುಕಿದ ಅವನ ಬದುಕು ತೆರೆದ ಪುಸ್ತಕವಾಗಿತ್ತು ಮತ್ತು ಅದು ಒಂದಲ್ಲ ಒಂದು ಕಥೆ ಸಾಹಿತ್ಯಗಳಲ್ಲಿ ಬೇರೆ ಬೇರೆ ಮುಖಗಳಲ್ಲಿ ಇಣುಕಿ ನೋಡುತ್ತಿತ್ತು. ಅವರ ಸಮಗ್ರ ಕೃತಿಗಳು ಹತ್ತೊಂಬತ್ತು ಸಂಪುಟಗಳಲ್ಲಿ ಪ್ರಕಟವಾಗಿವೆ. ಶೈಶವ, ಬಾಲ್ಯ ಯೌವನದ ಭಾಗಗಳನ್ನು ಒಳಗೊಂಡ 'ಆತ್ಮಕಥೆ'ಯನ್ನು ಬರೆದರೂ ಮುಂದುವರೆದ ಪೂರ್ಣವಾದ ಆತ್ಮಕಥೆ ಅವರಿಗೆ ಬರೆಯಲಾಗಲಿಲ್ಲ.

ಆರಂಭದಲ್ಲಿ ಅಶಿಸ್ತಿನ ವಿದ್ಯಾರ್ಥಿಯಾಗಿದ್ದ ಟಾಲ್‌ಸ್ಟಾಯ್ ಅಣ್ಣಂದಿರ ಬಲವಂತಕ್ಕೆ ವೇಶ್ಯಾಗೃಹಕ್ಕೆ ಹೋಗುತ್ತಾರೆ. ತನ್ನ ಮುಗ್ಧತೆಯೆಂಬ ಕನ್ಯತ್ವ ನಾಶವಾದದ್ದಕ್ಕೆ ವ್ಯಥಿತನಾಗುತ್ತಾನೆ. ವೈಯಕ್ತಿಕ ಬದುಕಿನಲ್ಲಿ ಎದುರಿಸಿದ ಸಂಕೀರ್ಣ ಸಂಬಂಧಗಳು, ದಾಂಪತ್ಯದಲ್ಲಿನ ಬಿರುಕುಗಳು, ಸೈನಿಕನಾಗಿ ಕಂಡ ಬರ್ಬರ ಜಗತ್ತು ಅವರನ್ನು ಇನ್ನಿಲ್ಲದಂತೆ ಕಾಡುತ್ತವೆ. ಎಲ್ಲ ಅನುಭವಗಳಿಗೂ ಮುಕ್ತನಾಗಿ ತೆರೆದುಕೊಂಡ ಟಾಲ್‌ಸ್ಟಾಯ್‌ಗೆ ಅವುಗಳನ್ನು ಮರೆಯಲು ಸಾಧ್ಯವಾಗುವುದಿಲ್ಲ. ಬಹುತೇಕ ಕಥೆಗಳು, ಕಾದಂಬರಿಗಳು ಅವರ ಆತ್ಮ ಚರಿತ್ರೆಯ ಭಾಗವೇ ಆಗಿವೆ.

ಟಾಲ್‌ಸ್ಟಾಯ್‌ಗೆ ಏಳು ವರ್ಷವಾಗಿದ್ದಾಗ ಅವನ ತಾಯಿ ತೀರಿಹೋಗುತ್ತಾಳೆ. ಅಮ್ಮ ಅವನ ಆತ್ಮೀಯ ಸಂಗಾತಿಯಾಗಿದ್ದಳು. ಅವಳು ಪಿಯಾನೋ ಮೂಲಕ ನುಡಿಸುತ್ತಿದ್ದ ಸ್ವರ ಸಂಯೋಜನೆಗಳು ಅವನನ್ನು ಕನಸಿನ ಲೋಕಕ್ಕೆ ಕೊಂಡೊಯ್ಯುತ್ತಿದ್ದವು. ಒಂದು ದಿನ ಚಿತ್ರ ಬರೆದು ಅದು ಸರಿಯಾಗಿ ಬರದ ಬೇಸರದಿಂದ ಹರಿದು ಹಾಕುತ್ತಾನೆ. ಅದೇ ವೇಳೆಯಲ್ಲಿ ತಾಯಿ ನುಡಿಸುತ್ತಿದ್ದ ಪಿಯಾನೋ ಸ್ವರ ಅವನನ್ನು ಹಿಡಿದು ನಿಲ್ಲಿಸುತ್ತದೆ. ಬಿಥೋವನ್‌ನ 'ಸೋನಾಟಾ ಪ್ಯಾಥಿಟಿಕೆ' (Sonata pathetiqee) ಎಂಬ ಸಂಯೋಜನೆ ಅದಾಗಿತ್ತು. ಬಿಥೋವನ್ ಜರ್ಮನಿಯಲ್ಲಿನ ಹೆಸರಾಂತ ಸ್ವರ ಸಂಯೋಜಕ ಹಾಗೂ ಪಿಯಾನೋ ವಾದಕ. ಕ್ಲಾಸಿಕಲ್ ಮತ್ತು ರೊಮ್ಯಾಂಟಿಕ್ ಸಂಗೀತ ಅನುಸಂಧಾನಕ್ಕೆ ಬಂದ ಕಾಲಘಟ್ಟದಲ್ಲಿ ಎಲ್ಲಾ ಕಾಲಕ್ಕೂ ಸಲ್ಲಬಹುದಾದ ಪ್ರತಿಭಾವಂತ ಸಂಯೋಜಕನಾಗಿದ್ದ. ಈ ಪಿಯಾನೋ ವಾದನ ಟಾಲ್‌ಸ್ಟಾಯ್ ಮನಸ್ಸಿನಲ್ಲಿ ಆಳವಾಗಿ ಬೇರೂರಿತ್ತು.

ಮುಂದೆ 1888ರಲ್ಲಿ ಇದೇ ಬಿಥೋವನ್‌ನ 'ಕ್ರೂಟ್ಸರ್ ಸೋನಾಟಾದ' ಎಂಬ ಸಂಯೋಜನೆಯನ್ನು ತಮ್ಮ ಮಾಸ್ಕೋದಲ್ಲಿನ ಮಗನ ಮನೆಯಲ್ಲಿ ಕೇಳುತ್ತಾನೆ. ಮಗ ಸೆರ್ಗಯಿ ಪಿಯನೋದಲ್ಲಿ ಹಾಗೂ ಆತನ ಸ್ನೇಹಿತನ ವಯಲಿನ್‌ನಲ್ಲಿ ಇದನ್ನು ಪ್ರಸ್ತುತ ಪಡಿಸಿದ್ದರು. ಇದನ್ನು ಕೇಳುವಾಗ ಅವರ ಜೊತೆಯಲ್ಲಿ ಕಲಾವಿದ ರೆಪಿನ್, ನಟ ಆಂಡ್ರೇವ್ ಬುರ್ಲಾರ್ ಜೊತೆಗಿದ್ದರು. ಸುಮಾರು 37 ನಿಮಿಷಗಳ ಈ ಸಂಯೋಜನೆಯಲ್ಲಿ ಮೂರು ಚಲನೆಗಳಿದ್ದವು. ಮೊದಲ ಚಲನೆಯಲ್ಲಿ ವಿಷಾದ, ಕೋಪ, ತಳಮಳವಿದ್ದರೆ ಎರಡನೆಯ ಚಲನೆಯಲ್ಲಿ ಅಧೀನತೆ, ಹಗುರತೆ, ಗಾಳಿಯ ಚಲನೆ ಕಂಡು ಬರುತ್ತಿತ್ತು. ಮೂರನೆಯ ಚಲನೆಯಲ್ಲಿ ಈ ಎಲ್ಲ ಭಾವಗಳಿಂದಾದ ಭಾವೋದ್ವೇಗದ ಅಲೆಗಳು ಸಂಚರಿಸುತ್ತಿದ್ದವು. ಅತ್ಯಂತ ಕಷ್ಟಕರವಾದ ಸಂಯೋಜನೆಯೆಂದು ಕ್ರೂಟ್ಸರ್ ಸೋನಾಟ ಕರೆಸಿಕೊಂಡಿತ್ತು. ಈ ಸಂಯೋಜನೆ ಕೇಳಿದ ನಂತರ ಟಾಲ್‌ಸ್ಟಾಯ್ ಹಾಗೂ ಅವರ ಕಲಾವಿದ ಸ್ನೇಹಿತರು ತಮ್ಮ ಮೇಲಾದ ಪ್ರಭಾವವನ್ನು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮರುರೂಪ ಕೊಡಬೇಕೆಂದು ನಿರ್ಧರಿಸುತ್ತಾರೆ. ರೆಪನ್‌ಗೆ ಮುಂದೆ ಇದು ಸಾಧ್ಯವಾಗಲಿಲ್ಲ. ನಟ ಬುರ್ಲಾಕ್‌ಗೆ ಇದನ್ನು ನಟನೆಯಲ್ಲಿ ತರಲಾಗದೆ ಮುಂದೊಂದು ದಿನ ಸಾವಿಗೀಡಾಗುತ್ತಾನೆ. ಉಳಿದವನಾದ ಟಾಲ್‌ಸ್ಟಾಯ್ ಸ್ವಗತದ ರೂಪದ, 17 ಪುಟಗಳು ಓದಿ ಅಭಿನಯಿಸಬಹುದಾದ ರೀತಿಯಲ್ಲಿ 'ತನ್ನ ಹೆಂಡತಿಯ ಕೊಲೆಗಾರ' ಎಂಬ ಕರಡುಪ್ರತಿ ರಚಿಸುತ್ತಾನೆ. ಮುಂದೆ ಇದೇ ಸ್ವಗತ 'ಕ್ರೂಟ್ಸರ್ ಸೊನಾಟಾ' ಎಂಬ ನೀಳ್ಗತೆಯ ರೂಪ ಪಡೆಯುತ್ತದೆ. ಕನ್ನಡದ ಸಂದರ್ಭದಲ್ಲಿ ಪ್ರಸಿದ್ಧ ಜನಪದ ವಿದ್ವಾಂಸರಾದ ಎ.ಕೆ. ರಾಮಾನುಜನ್ ರಾತ್ರಿ ಹಾವಾಗುವ, ಹಗಲು ಮನುಷ್ಯನಾಗುವ ಒಡೆದ ವ್ಯಕ್ತಿತ್ವವೊಂದರ ಕತೆಯನ್ನು ಗಿರೀಶ್ ಕರ್ನಾಡ್ ಹಾಗೂ ಚಂದ್ರಶೇಖರ ಕಂಬಾರರಿಗೆ ಹೇಳುತ್ತಾರೆ. ಇಬ್ಬರೂ ನಾಟಕಕಾರರಿಂದ ನಾಗಮಂಡಲ ಹಾಗೂ ಸಿರಿಸಂಪಿಗೆ ಎಂಬ ನಾಟಕಗಳು ರಚಿತಗೊಂಡಿದ್ದು ಅವು ಕನ್ನಡದ ಹೆಸರಾಂತ ನಾಟಕಗಳ ಪಟ್ಟಿಗೆ ಸೇರಿಕೊಂಡಿವೆ.

ಕ್ರೂಟ್ಸರ್ ಸೋನಾಟಾ ಪತ್ತೇದಾರಿ ನಾಟಕಗಳ ಮಾದರಿಯಲ್ಲಿ ಚಲಿಸುವ ರೈಲಿನಲ್ಲಿ ನಡೆಯುವ ಕಥೆ. ಚಲಿಸುವ ರೈಲಿನಲ್ಲಿ ಕಥಾನಾಯಕ.,ಲಾಯರ್, ಹೆಂಗಸು, ವ್ಯಾಪಾರಿ ಹಾಗೂ ಒಬ್ಬ ಯುವಕ ಒಟ್ಟಿಗೆ ಕುಳಿತಿದ್ದಾರೆ. ಜನ ಎಜುಕೇಟ್ ಆಗುತ್ತಿರುವುದರಿಂದ ಡೈವೋರ್ಸ್ ಹೆಚ್ಚುತ್ತಿದೆ ಎಂಬ ಮಾತಿನಿಂದ ಆರಂಭವಾದ ಚರ್ಚೆ ಪ್ರೀತಿಯೆಂದರೇನು, ಅದು ಎಷ್ಟು ಕಾಲ ಇರಬಲ್ಲದು ಈ ರೀತಿ ಮುಂದುವರೆಯುತ್ತದೆ. ಈ ಗದ್ದಲದಲ್ಲಿ ಭಾಗವಹಿಸದ ಯುವಕ ಬರಿಯ ಕೇಳುಗನಾಗಿರುತ್ತಾನೆ. ಚರ್ಚೆ ಮುಂದುವರೆದು ಮದುವೆ ಎನ್ನುವ ವ್ಯವಸ್ಥೆ ಕುಸಿದಿದೆ. ಅದರ ತಳಪಾಯ ಹಳೆಯದಾಗಿ ದುರ್ಬಲವಾಗಿದೆ ಎಂಬ ಅಭಿಪ್ರಾಯ ಮೂಡುತ್ತದೆ. ಲಾಯರ್ ಈ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ತಾನು ಕೇಳಿದ ಒಂದು ಕೇಸನ್ನು ಉದಾಹರಿಸಿ, ಆ ಗಂಡ ಅಸೂಯೆಯಿಂದ ತನ್ನ ಹೆಂಡತಿಯನ್ನು ಕೊಂದ ಎನ್ನುತ್ತಾನೆ. ವಿಶೇಷವೆಂದರೆ ಹೆಂಡತಿಯನ್ನು ಕೊಂದ ಗಂಡ ಅವರ ಜೊತೆಯಿದ್ದ ಯುವಕನೇ ಆಗಿದ್ದು ತಾನೇ ಆ ವ್ಯಕ್ತಿ ಎಂದು ಪರಿಚಯಿಸಿಕೊಂಡು ತನ್ನ ಕಥೆಯನ್ನು ಹೇಳಲಾರಂಭಿಸುತ್ತಾನೆ. ಕ್ರೂಟ್ಸರ್ ಸೋನಾಟದ ಮೂರು ಹಂತದ ಚಲನೆಗಳು ವಿಷಾದ, ರೋಷ, ಅಧೀನತೆ, ಗಾಳಿಯ ಚಲನೆ, ಭಾವೋದ್ವೇಗದ ತರಂಗಗಳು ಅವನ ನಿವೇದನೆಯಲ್ಲಿ ಬಿಚ್ಚಿಕೊಳ್ಳುತ್ತವೆ.

ಅದ್ಭುತವಾದ ಸಂಗೀತ, ಕಲೆಯ ತಂತ್ರಗಳನ್ನುಳ್ಳ ಈ ಕಥೆಯಲ್ಲಿ ಟಾಲ್‌ಸ್ಟಾಯ್ ಹೇಳ ಹೊರಟಿರುವುದು ಲೈಂಗಿಕ ಹಾಗೂ ದಾಂಪತ್ಯದ ಬಗೆಗಿನ ಸಂಕೀರ್ಣಭಾವಗಳನ್ನು ಹಾಗೂ ಪ್ರತಿಯೊಬ್ಬರ ಬದುಕಿನಲ್ಲಿ ಆಟವಾಡುವ ಅವುಗಳ ತೀವ್ರತೆಯನ್ನು ವೈಯಕ್ತಿಕ ಬದುಕಿನ ಶೋಧನೆಗಳ ಮೂಲಕ ಜನಸಾಮಾನ್ಯ ಬದುಕಿನ ಶೋಧನೆಯನ್ನು ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಎಂಬಂತೆ ಕಟ್ಟಿಕೊಡುವುದು ಟಾಲ್‌ಸ್ಟಾಯ್ ಅವರಂತಹ ಮಹಾಲೇಖಕರಿಗೆ ಮಾತ್ರ ಸಾಧ್ಯ.

**■ ಅಮೃತಮತಿ**

## ಮಾತೇ ಮುತ್ತು

- ಇತಿಹಾಸ ಮಾನವನನ್ನು ಜಾಣನನ್ನಾಗಿ ಮಾಡುತ್ತದೆ.
  —ಫ್ರಾನ್ಸಿಸ್ ಬೇಕನ್
- ಯಾವ ಕೆಲಸವನ್ನೇ ಆಗಲಿ ಉತ್ಸಾಹದಿಂದ ಮಾಡಬಲ್ಲವನು ತನ್ನ ಗುರಿ ಮುಟ್ಟದೆ ಇರಲಾರ.
  —ವಾಲ್ಮೀಕಿ
- ಕೋಪದಿಂದ ಕೀರ್ತಿ ನಾಶವಾಗುವುದು. ಕೋಪ ಸಂಪತ್ತನ್ನು ಹಾಳು ಮಾಡುತ್ತದೆ.
  —ಸ್ಕಂದ ಪುರಾಣ
- ಪ್ರಪಂಚ ಒಂದಾಗದೇ ಹೋದಲ್ಲಿ ಅಂತಹ ಪ್ರಪಂಚದಲ್ಲಿ ಬದುಕಲು ಬಯಸುವುದಿಲ್ಲ.
  —ಗಾಂಧೀಜಿ
- ಪ್ರೇಮಕ್ಕೆ ಕಣ್ಣಿಲ್ಲ ಎನ್ನುವುದು ತಪ್ಪು, ಅಸೂಯೆಗೆ ಕಣ್ಣಿಲ್ಲ.
  —ಟೆರ್ರಲ್
- ದುರಾಸೆ ಎನ್ನುವುದು ಕಲಿತವರ ಹೃದಯದಿಂದ ಗುಣವನ್ನು ಕಸಿದುಬಿಡುತ್ತದೆ.
  —ಹತೀಸ್